# ಅಲಂಕಾರ, ಕಲೆ ಮತ್ತು ಆಹಾರ!



**ಮನೆಯ ಸುತ್ತ ಅಲಂಕಾರಕ್ಕೆ ದುಬಾರಿ ವಸ್ತುಗಳನ್ನೇ ತಂದಿಡಬೇಕಿಲ್ಲ. ಅಲಂಕಾರಕ್ಕಾಗಿ ಬೆಳೆಸುವ ಗಿಡಗಳ ಸುತ್ತ ಹೊಸ ವಿನ್ಯಾಸಗಳನ್ನು ಜೋಡಿಸಬಹುದು. ಆಹಾರಕ್ಕಾಗಿ ಬೆಳೆದದ್ದೇ ಅಲಂಕಾರಕ್ಕೂ ಆಗಬಹುದು.**

**★ ಚಿತ್ರ- ಲೇಖನ: ಸರೋಜಾ ಪ್ರಕಾಶ**

ನಮ್ಮಲ್ಲಿ ತೆಂಗಿನಕಾಯಿ ಬಳಸದೇ ಇರುವ ಮನೆಯೇ ಇಲ್ಲ ಎನ್ನಬಹುದು. ತೆಂಗಿನ ಗೆರಟೆ ಅಥವಾ ಕರಟ ದೊರಗಾದ ಹೊರಮೈ ಹಾಗೂ ನುಣುಪಾದ ಒಳಮೈ ಹೊಂದಿರುತ್ತದೆ. ಕೆಲವನ್ನು ಪುಟ್ಟ ಕುಂಡಗಳನ್ನಾಗಿ ಪರಿವರ್ತನೆ ಮಾಡಬಹುದು. ದೊಡ್ಡ ಆಕಾರದ ಕರಟಗಳನ್ನು, ಬಿಸಾಡಲು ಎತ್ತಿಟ್ಟ ಪ್ಲಾಸ್ಟಿಕ್ ಅಥವಾ ಗಾಜಿನ ಬಾಟಲಿಗಳನ್ನು ಹಾಗೂ ಮೊಬೈಲ್ ಮತ್ತಿತರ ಸಾಮಗ್ರಿಗಳನ್ನು ತಂದ ಸುಂದರ ಮತ್ತು ಸದೃಢವಾದ ರಟ್ಟಿನ  ಪ್ಯಾಕುಗಳನ್ನು ಒಂದೆಡೆ ಇಟ್ಟುಕೊಂಡಿರಿ. ಇವುಗಳು ಕಸದಿಂದ ರಸ ಪ್ರಯೋಗಗಳಿಗೆ ಯೋಗ್ಯವಾದ ಸಾಮಗ್ರಿಗಳು.

ಗಿಡಗಳನ್ನು ಅಲಂಕಾರಿಕವಾಗಿ, ಕಲಾತ್ಮಕತೆ ತುಂಬಿ ಅಥವಾ ಆಹಾರ ಪದಾರ್ಥಗಳಿಗಾಗಿ ಬೆಳೆಸಬಹುದು ತಾನೆ? ಮೇಲೆ ಹೇಳಿದ ಸಾಮಾನುಗಳನ್ನು ಬಳಸಿ ಮಾಡಬಹುದಾದ ಕೆಲವು ಮಾದರಿಗಳು ಇಲ್ಲಿವೆ.

ಕಳ್ಳಿ ಜಾತಿಯ ಗಿಡಗಳಿಗೆ ಅತ್ಯಂತ ಕಡಿಮೆ ನೀರು ಸಾಕು. ಅಂಥವನ್ನು ಕರಟದಲ್ಲಿ ನೆಟ್ಟು ಸೂಕ್ತವಾದ ಅಂದದ ಪುಟ್ಟ ಪೆಟ್ಟಿಗೆಯೊಂದರಲ್ಲಿ ಇರಿಸಿ ಕಪಾಟಿನ ಮೇಲೋ ಗೋಡೆಯ ಸ್ಟ್ಯಾಂಡ್‌ನಲ್ಲೋ ಇಟ್ಟರೆ ಅತ್ಯಂತ ಕಡಿಮೆ ನಿಗಾ ಅವುಗಳಿಗೆ ಸಾಕು. 15—20 ದಿನಗಳಿಗೊಮ್ಮೆ ನೀರು ಹಾಕಿ, ಹೊರಸುತ್ತಿನ ಎಲೆಯೇನಾದರೂ ಒಣಗಿದರೆ ಕತ್ತರಿಸಿ ತೆಗೆದು, ಬಟ್ಟೆಯಿಂದ ಒರೆಸಿ ಅಥವಾ ಸ್ಪ್ರೇಯರ್‌ನಿಂದ ನೀರು ಚಿಮುಕಿಸಿ ಅಥವಾ ಹುರುಪಿದ್ದರೆ ಬಾತ್‌ರೂಮಿಗೊಯ್ದು ಎಲೆಗಳನ್ನು ತೊಳೆದಿಟ್ಟರೆ ಇಡೀ ಗಿಡ ತಾಜಾತನ ಪಡೆಯುತ್ತದೆ. ಆ ತಾಜಾತನವನ್ನು ನಮಗೂ ವರ್ಗಾಯಿಸುತ್ತದೆ. ಇದೇ ಕ್ರಮವನ್ನು ಪಾಮ್ ಜಾತಿಯ ಗಿಡಗಳಿಗೂ ಬಳಸಬಹುದು. ಟೀಪಾಯಿಯ ಮೇಲೆ (ಚಿತ್ರ ನೋಡಿ) ಇಂಥದೊಂದು ಜೀವಂತ ಸಸಿಯನ್ನು ಇಟ್ಟು ನೋಡಿ; ಇಡೀ



